ಬೆವಿಕಂ
BESCOM

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಂ. ಪ್ರವ್ಯ(ಮಾ&ವಾ)/ಉಪ್ರವ್ಯ(ಮಾ&ವಾ)/2018-19/CYS-15
ಲಗತ್ತು:

ಪ್ರಧಾನ ವ್ಯವಸ್ಥಾಪಕರು (ವಿ)
(ಮಾಪಕ ಮತ್ತು ವಾಣಿಜ್ಯ)
ನಿಗಮ ಕಾರ್ಯಾಲಯ, ಬೆಸ್ಕಾಂ

ದಿನಾಂಕ: 29/06/18

## ಸುತ್ತೋಲೆ

**ವಿಷಯ:** ಪೂರ್ವ ಪಾವತಿ ಮಾಪಕಗಳನ್ನು ಅಳವಡಿಸಲಾಗುವ ಮತ್ತು ಈಗಾಗಲೇ ಅಳವಡಿಸಿರುವ ತಾತ್ಕಾಲಿಕ ಸ್ಥಾವರಗಳಿಗೆ ಮುಂಗಡ ಬಳಕೆ ಶುಲ್ಕವನ್ನು ಪೂರ್ವ ಪಾವತಿ ಬಳಕೆ ಶುಲ್ಕವಾಗಿ ಬದಲಾಯಿಸುವ ಬಗ್ಗೆ.

**ಉಲ್ಲೇಖ:** 1. ವಿ.ಕಾ.ಸಂ. ಬೆವಿಕಂ/ಪೂಪಾ/ಪ್ರ.ವ್ಯ (ಮಾ & ವಾ)/ ವಿ.ಕಾ./028/17-18 ದಿನಾಂಕ 25.07.2017.

2. ಮಾನ್ಯ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಬರೆದ ಪತ್ರ ಸಂ.ಬೆವಿಕಂ/ಪ್ರ.ವ್ಯ (ಲೆ&ಜ)/ಉ.ಪ್ರ.ವ್ಯ (ನಿ.ವ್ಯ)/ಬಿ.ಸಿ.26/2411/2017-18/83 ದಿನಾಂಕ 09.05.2018.

3. ಹೆಬ್ಬಾಳ ವಿಭಾಗದಲ್ಲಿ ದಿನಾಂಕ 21.06.2018 ರಂದು ನಡೆದ ಸಭೆಯ ನಡಾವಳಿ.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಚಾಲ್ತಿಯಲ್ಲಿರುವ ಜಕಾತಿ ಆದೇಶದ ಅನುಸಾರವಾಗಿ ಎಲ್ಲಾ ತಾತ್ಕಾಲಿಕ ಸ್ಥಾವರಗಳಿಗೆ ಪೂರ್ವಪಾವತಿ ಮಾಪಕಗಳನ್ನು ಕಡ್ಡಾಯವಾಗಿ ಅಳವಡಿಸುವ ಸಲುವಾಗಿ ಈಗಾಗಲೇ ಉಲ್ಲೇಖ(1)ರಲ್ಲಿ ವಿವರವಾದ ಕಾರ್ಯಾದೇಶವನ್ನು ನೀಡಲಾಗಿದೆ. ಪ್ರಸ್ತುತ, ಅಂತಹ ಗ್ರಾಹಕರು ಈ ಕೆಳಗಿನ ಶುಲ್ಕಗಳನ್ನು ಪಾವತಿಸಬೇಕಾಗಿರುತ್ತದೆ.

1. ಸೇವಾ ಶುಲ್ಕಗಳು (service charges)
2. ಮುಂಗಡ ಬಳಕೆ ಶುಲ್ಕ (advance consumption charges)
3. ಮಾಪಕದ ಬಾಡಿಗೆ ಮತ್ತು ಮಾಪಕ ಭದ್ರತೆ ಶುಲ್ಕ (Meter rentals and Meter security deposit)
4. ಪೂರ್ವ ಪಾವತಿ ಬಳಕೆ ಶುಲ್ಕ. (Pre-paid consumption charges)

ಮುಂದುವರೆದಂತೆ, ದಿನಾಂಕ 4.4.2018ರಂದು ನಿಗಮ ಕಛೇರಿಯಲ್ಲಿ ನಡೆದ ಸಭೆಯ ನಡಾವಳಿಗಳ ಪ್ರಕಾರ ವಿದ್ಯುಚ್ಛಕ್ತಿ ಕಾಯಿದೆ 2003ರ ಷರತ್ತು 47ರ ಕ್ರ.ಸಂ (5)ರ ಅನ್ವಯ, ಪೂರ್ವಪಾವತಿ ಮಾಪಕಗಳಿಗೆ ಮುಂಗಡ ಬಳಕೆ ಶುಲ್ಕ

(ACC) ವಸೂಲಾತಿಯನ್ನು ವಿನಾಯಿತಿಗೊಳಿಸುವ ಬಗ್ಗೆ ಮಾನ್ಯ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಗಮನಕ್ಕೆ ತಂದು ಮುಂದಿನ ಕ್ರಮಕೈಗೊಳ್ಳುವಂತೆ ಪ್ರಸ್ತಾಪಿಸಲಾಗಿತ್ತು.
ಈ ಸಂಬಂಧವಾಗಿ ಪೂರ್ವಪಾವತಿ ವ್ಯವಸ್ಥೆಯ ವ್ಯಾಪ್ತಿಗೆ ಒಳಪಡುವ ಗ್ರಾಹಕರಿಗೆ ಮುಂಗಡ ಬಳಕೆ ಶುಲ್ಕದ ವಿನಾಯಿತಿ ಕೋರಿ ಮಾನ್ಯ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅನುಮತಿಗೆ ನಿಗಮ ಕಛೇರಿಯಿಂದ ಉಲ್ಲೇಖ(2)ರಲ್ಲಿ ತಿಳಿಸಿರುವಂತೆ ಪತ್ರವನ್ನು ಬರೆಯಲಾಗಿತ್ತು. ಮಾನ್ಯ ಕ.ವಿ.ನಿ.ಆಯೋಗವು ಎಲ್.ಟಿ.7 ಜಕಾತಿಯಡಿ ಪೂರ್ವಪಾವತಿ ಮಾಪಕಗಳನ್ನು ಅಳವಡಿಸುವ/ ಅಳವಡಿಸಿದ ತಾತ್ಕಾಲಿಕ ಸ್ಥಾವರಗಳ ಗ್ರಾಹಕರಿಂದ ಮುಂಗಡ ಬಳಕೆ ಶುಲ್ಕ (ACC) ವನ್ನು ಸ್ವೀಕರಿಸುವ ವಿಷಯದಲ್ಲಿ ವಿದ್ಯುತ್ ಕಾಯ್ದೆ–2003ರ ಪ್ರಕಾರ ಕ್ರಮ ಜರುಗಿಸಲು ನಿರ್ದೇಶಿಸಿರುತ್ತಾರೆ.

ಮುಂದುವರೆದಂತೆ, ಇನ್ನು ಮುಂದೆ ಪೂರ್ವಪಾವತಿ ಮಾಪಕಗಳ ಮಂಜೂರಾದ ಹೊರೆ ಹಾಗೂ ಗರಿಷ್ಟ ಬೇಡಿಕೆಗಳು ಕಡ್ಡಾಯವಾಗಿ 1:1 ಅನುಪಾತದಲ್ಲಿ ಪ್ರೋಗ್ರಾಂ ಆಗಿರಬೇಕು. ಈ ಅಗತ್ಯತೆಯನ್ನು ಪಾಲಿಸಲು ಪೂರ್ವಪಾವತಿ ಮಾಪಕಗಳ ಸೇವೆ ಒದಗಿಸುವ ಸಂಸ್ಥೆಯು ಅಗತ್ಯ ಕ್ರಮ ಕೈಗೊಂಡು ಶೀಘ್ರವೇ ಪ್ರೋಗ್ರಾಂ ಆಗುವಂತೆ ಖಾತರಿಗೊಳಿಸುವುದು.

ಇಂದಿರಾನಗರ ವಿಭಾಗದಲ್ಲಿ ತಾತ್ಕಾಲಿಕ ಸ್ಥಾವರಗಳಿಗೆ ಕಾರ್ಡ್ ತಂತ್ರಾಂಶವುಳ್ಳ ಪೂರ್ವಪಾವತಿ ಮಾಪಕಗಳನ್ನು ಅಳವಡಿಸಲು ಸೇವೆ ಒದಗಿಸುತ್ತಿರುವ ಸಂಸ್ಥೆಯು ಈಗಾಗಲೇ ಸರಬರಾಜು ಮಾಡಿರುವ ಪೂರ್ವಪಾವತಿ ಮಾಪಕಗಳಿಗೆ ಮಂಜೂರಾದ ಹೊರೆ ಹಾಗೂ ಗರಿಷ್ಟ ಬೇಡಿಕೆಗಳು ಕಡ್ಡಾಯವಾಗಿ 1:1 ಅನುಪಾತದಲ್ಲಿ ಪ್ರೋಗ್ರಾಂ ಮಾಡಲು 2 ರಿಂದ 3 ತಿಂಗಳುಗಳ ಕಾಲಾವಕಾಶ ಕೇಳಿರುವ ಹಿನ್ನೆಲೆಯಲ್ಲಿ ಈ ಸುತ್ತೋಲೆಯು ಇಂದಿರಾನಗರವನ್ನು ಹೊರತುಪಡಿಸಿ, ಬೆ.ವಿ.ಕಂ.ನ ಉಳಿದ ಕಾ ಮತ್ತು ಪಾ ಉಪವಿಭಾಗಗಳಿಗೆ ಅನ್ವಯಿಸುತ್ತದೆ.

ತತ್ಸಂಬಂಧ ತಾತ್ಕಾಲಿಕ ಸ್ಥಾವರಗಳಿಗೆ ವಿವಿಧ ಸನ್ನಿವೇಶಗಳಲ್ಲಿ ಎಲ್ಲಾ ಉಪವಿಭಾಗಾಧಿಕಾರಿಗಳು ಈ ಕೆಳಕಂಡಂತೆ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

೧) ಮಂಜೂರಾದ ಹೊರೆಯ ಆಧಾರದ ಮೇಲೆ ಮುಂಗಡ ಬಳಕೆ ಶುಲ್ಕದ ಮೊತ್ತವನ್ನು ಪೂರ್ವ ಪಾವತಿ ಬಳಕೆ ಶುಲ್ಕವಾಗಿ ಪರಿವರ್ತಿಸಿಕೊಳ್ಳುವುದು ಹಾಗೂ ಹೆಚ್ಚುವರಿಯಾಗಿ ಪೂರ್ವ ಪಾವತಿ ಬಳಕೆ ಶುಲ್ಕ ಇನ್ನು ಮುಂದೆ ಇರುವುದಿಲ್ಲ. ಸೇವಾ ಶುಲ್ಕಗಳು ಹಾಗೂ ಮಾಪಕ ಭದ್ರತೆ ಶುಲ್ಕಗಳನ್ನು ಪ್ರಸ್ತುತ ನಿಯಮಗಳ ಪ್ರಕಾರ ವಸೂಲಿ ಮಾಡಬೇಕು ಮತ್ತು ಇವುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

೨) ಹಾಲಿ ಅಸ್ತಿತ್ವದಲ್ಲಿರುವ ಎಲ್.ಟಿ.7 ಗ್ರಾಹಕರು ಪೂರ್ವ ಪಾವತಿ ಬಳಕೆ ವ್ಯವಸ್ಥೆಗೆ ಬದಲಾಯಿಸಲ್ಪಟ್ಟಾಗ ಅಂತಹ ಗ್ರಾಹಕರಿಂದ ಸಂಗ್ರಹಿಸಲಾದ ಮುಂಗಡ ಬಳಕೆಯ ಉಳಿಕೆ ಹಣವನ್ನು ಪೂರ್ವ ಪಾವತಿ ಬಳಕೆ ಶುಲ್ಕವನ್ನಾಗಿ ಬದಲಾಯಿಸುವುದು.

೩) ಹೊಸದಾಗಿ ಎಲ್.ಟಿ.7 ಜಕಾತಿಯಡಿ ಪೂರ್ವಪಾವತಿ ವ್ಯವಸ್ಥೆಗೆ ಒಳಪಡುವ ಗ್ರಾಹಕರಿಂದ ಇನ್ನು ಮುಂದೆ ಮುಂಗಡ ಬಳಕೆ ಶುಲ್ಕದ ಮೊತ್ತವನ್ನು ಪೂರ್ವ ಪಾವತಿ ಬಳಕೆ ಶುಲ್ಕವನ್ನಾಗಿ ಪಡೆಯುವುದು ಹಾಗೂ ಮುಂಗಡ ಬಳಕೆ ಎಂಬ ಪದವನ್ನು ಬಳಸಬಾರದು.

ಮೇಲೆ ತಿಳಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ಎಲ್ಲಾ ಸಂಬಂಧಿತ ಉಪವಿಭಾಗದ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ LT7 ಸ್ಥಾವರಗಳಿಗೆ 1:1 ಅನುಪಾತದಲ್ಲಿ ಪ್ರೋಗ್ರಾಂ ಆಗಿರುವ ಪೂರ್ವಪಾವತಿ ಮಾಪಕಗಳನ್ನು ಮಾತ್ರ ಉಪಯೋಗಿಸುವುದು. ಈ ಸುತ್ತೋಲೆಯು ಮುಂದಿನ ಆದೇಶ ಹೊರಡಿಸುವವರೆವಿಗೂ ಚಾಲ್ತಿಯಲ್ಲಿರುತ್ತದೆ.

| |
|---|
| ವ್ಯವಸ್ಥಾಪಕ ನಿರ್ದೇಶಕರಿಂದ<br>ಅನುಮೋದಿಸಲ್ಪಟ್ಟಿದೆ. |

29/06

**ಪ್ರಧಾನ ವ್ಯವಸ್ಥಾಪಕರು (ಮಾ & ವಾ)**
**ನಿಗಮ ಕಛೇರಿ, ಬೆವಿಕಂ**

**ಪ್ರತಿಗಳು:**

1. ಎಲ್ಲಾ ಮುಖ್ಯ ಪ್ರಧಾನ ವ್ಯವಸ್ಥಾಪಕರು, ಬೆವಿಕಂ., ನಿಗಮ ಕಛೇರಿ. ಕೆ.ಆರ್. ವೃತ್ತ, ಬೆಂಗಳೂರು.
2. ಎಲ್ಲಾ ಮುಖ್ಯ ಇಂಜಿನಿಯರುಗಳು (ವಿ), ಬೆಂಮಕ್ಷೇವ(ಉತ್ತರ)/(ದಕ್ಷಿಣ)/ಬೆಂಗ್ರಾಕ್ಷೇವ/ಚಿತ್ರದುರ್ಗ ವಲಯ
3. ಎಲ್ಲಾ ಅಧೀಕ್ಷಕ ಇಂಜಿನಿಯರುಗಳು (ವಿ), ಕಾ ಮತ್ತು ಪಾ ವೃತ್ತಗಳು, ಬೆವಿಕಂ.
4. ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ) ಬೆವಿಕಂ., ನಿಗಮ ಕಛೇರಿ. ಕೆ.ಆರ್. ವೃತ್ತ, ಬೆಂಗಳೂರು ಇವರಿಗೆ ಬೆವಿಕಂ ಜಾಲತಾಣದಲ್ಲಿ ಪ್ರಕಟಿಸಲು ಕೋರಿ.
5. ಎಲ್ಲಾ ಪ್ರಧಾನ ವ್ಯವಸ್ಥಾಪಕರು, ಬೆವಿಕಂ., ನಿಗಮ ಕಛೇರಿ. ಕೆ.ಆರ್. ವೃತ್ತ, ಬೆಂಗಳೂರು.
6. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ), ಕಾ ಮತ್ತು ಪಾ ವಿಭಾಗಗಳು, ಬೆವಿಕಂ.
7. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ), ಕಾ ಮತ್ತು ಪಾ ಉಪವಿಭಾಗಗಳು, ಬೆವಿಕಂ. ಇವರಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ.
8. ಮಾನ್ಯ ವ್ಯ.ನಿ/ನಿ(ತಾಂ)/ನಿ(ಹ)ರವರ ಆಪ್ತ ಸಹಾಯಕರು, ಇವರಿಗೆ ಮಾನ್ಯ ವ್ಯ.ನಿ/ನಿ(ತಾಂ)/ ನಿ(ಹ)ರವರ ಗಮನಕ್ಕೆ ತರಲು ಕೋರಿ.
9. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಸಹಾಯಕರು, ಇಂಧನ ಇಲಾಖೆ, ಕರ್ನಾಟಕ ಸರ್ಕಾರರ ಇವರಿಗೆ ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳವರ ಗಮನಕ್ಕೆ ತರಲು ಕೋರಿ.
10. ಮೆ॥ ಎನ್ಸೂರ್ ರಿಲೆಯಬಲ್ ಪವರ ಸಲ್ಯೂಷನ್ಸ್ ಲಿಮಿಟೆಡ್, #606, ಜೆ ಟವರ್ಸ್, ಬಿನ್ನಿಸ್ಟನ್ ಗಾರ್ಡನ್, ಕೆ.ಪಿ. ಅಗ್ರಹಾರ, ಮಾಗಡಿ ಮೇನ್ ರೋಡ್, ಬೆಂಗಳೂರು-23 ಇವರಿಗೆ ಅಗತ್ಯ ಕ್ರಮಕ್ಕಾಗಿ.
11. ಮುಖ್ಯಕಡತ.